# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 388(474)

ಸದಸ್ಯರ ಹೆಸರು : ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 19.02.2024.

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಪ್ರಾಥಮಿಕ ಶಾಲೆಗಳಿಗೆ 2002ರ ನಂತರ ಯಾವ ಯಾವ ವಿಷಯಗಳಿಗೆ ವಿಷಯವಾರು ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. | ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು-2001ರನ್ವಯ ಸಾಮಾನ್ಯ, ವಿಜ್ಞಾನ, ಇಂಗ್ಲೀಷ್ ಮತ್ತು ಹಿಂದಿ ವಿಷಯಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. |
| ಆ) | ಪ್ರಾಥಮಿಕ ಶಾಲಾ ಹಿಂದಿ ಸಹ ಶಿಕ್ಷಕರನ್ನು ಯಾವ ತರಗತಿಗಳಿಗೆ ಪಾಠ ಬೋಧನೆ ಮಾಡಲು ನೇಮಕಾತಿ ಮಾಡಿಕೊಳ್ಳಲಾಗಿದೆ. | 2015 ರ ಪೂರ್ವದಲ್ಲಿ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರನ್ನು 1 ರಿಂದ 7 ನೇ ತರಗತಿಗಳ ಬೋಧನೆಗಾಗಿ ನೇಮಕಾತಿ ಮಾಡಿಕೊಳ್ಳಲಾಗುತ್ತಿತ್ತು. ಹೀಗೆ ನೇಮಕಾತಿ ಮಾಡಿಕೊಂಡ ಶಿಕ್ಷಕರುಗಳು ನೇಮಕಾತಿ ಹೊಂದಿರುವ ವಿಷಯದ ಜೊತೆಗೆ ಇತರೆ ವಿಷಯಗಳನ್ನು ಬೋಧಿಸಬೇಕಾಗಿತ್ತು. |
| ಇ) | 2016ರ ಪೂರ್ವದಲ್ಲಿ 6 ರಿಂದ 7/8 ನೇ ತರಗತಿಗೆ ನೇಮಕವಾಗಿದ್ದ ಪ್ರಾಥಮಿಕ ಶಾಲಾ ಹಿಂದಿ ಸಹ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಹಿಂದಿ (1 ರಿಂದ 5ನೇ ತರಗತಿ) ಶಿಕ್ಷಕರೆಂದು ಪದನಾಮೀಕರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>2015 ರ ಪೂರ್ವದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು 1 ರಿಂದ 7 ನೇ ತರಗತಿಗಳ ಬೋಧನೆಗಾಗಿ ನೇಮಕಾತಿ ಮಾಡಿಕೊಳ್ಳಲಾಗುತ್ತಿತ್ತು. ಎನ್.ಸಿ.ಟಿ.ಇ ನಿಗಧಿಪಡಿಸಿದ ವಿದ್ಯಾರ್ಹತೆಯನುಸಾರ 2017ನೆ ಸಾಲಿನಲ್ಲಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು(6 ರಿಂದ 8) ಎಂಬ ಹೊಸ ವೃಂದವನ್ನು ಸೃಜಿಸಲಾಗಿರುತ್ತದೆ. ಅದರಂತೆ 2015ರ ಪೂರ್ವದಲ್ಲಿ ನೇಮಕ ಹೊಂದಿದ ಶಿಕ್ಷಕರುಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರು (1-5) ಎಂದು ಪದನಾಮೀಕರಿಸಲಾಗಿರುತ್ತದೆ. |

| | | |
|---|---|---|
| ಈ) | ಪ್ರಾಥಮಿಕ ಶಾಲೆ ಹಿಂದಿ (1 ರಿಂದ 5ನೇ ತರಗತಿ) ಶಿಕ್ಷಕರು ಯಾವ ತರಗತಿಗಳಿಗೆ ಪಾಠ ಬೋಧನೆ ಮಾಡಲು ಅವಕಾಶ ನೀಡಲಾಗಿದೆ: | ಹಿಂದಿ ವಿಷಯವು 6ನೇ ತರಗತಿಯಿಂದ ಪ್ರಾರಂಭವಾಗುವುದರಿಂದ, 2017ರ ಪೂರ್ವದಲ್ಲಿ ನೇಮಕಾತಿ ಹೊಂದಿದ್ದರೂ ಸಹ, ಸರ್ಕಾರದ ಆದೇಶ ಸಂಖ್ಯೆ: ಇಡಿ 626 ಪಿಬಿಎಸ್ 2017, ದಿನಾಂಕ 19.05.2017 ರಲ್ಲಿನ ಅವಕಾಶದನ್ವಯ, ಪ್ರಾಥಮಿಕ ಶಾಲಾ ಶಿಕ್ಷಕರನ್ನು (1 ರಿಂದ 5ನೇ ತರಗತಿ) 6 ರಿಂದ 8 ನೇ ತರಗತಿಗಳಿಗೆ ಬೋಧಿಸಲು ಸೂಚಿಸಲಾಗಿದೆ. |
| ಉ) | ರಾಜ್ಯದಲ್ಲಿ ಮಂಜೂರಾಗಿರುವ ಪ್ರಾಥಮಿಕ ಶಾಲಾ ಹಿಂದಿ (PST Hindi) ಶಿಕ್ಷಕರು ಹಾಗೂ ಪದವೀಧರ ಪ್ರಾಥಮಿಕ ಶಾಲಾ ಹಿಂದಿ (GPT-Hindi) ಶಿಕ್ಷಕರ ಜಿಲ್ಲಾವಾರು ಹುದ್ದೆಗಳ ಮಾಹಿತಿ ನೀಡುವುದು. | ಅನುಬಂಧದಲ್ಲಿ ಒದಗಿಸಿದೆ. |
| ಊ) | ಪ್ರಾಥಮಿಕ ಶಾಲಾ ಹಿಂದಿ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಭಾಷಾ ಶಿಕ್ಷಕರೆಂದು ಪದನಾಮೀಕರಿಸಲು ಯಾವ ನಿಯಮಗಳನ್ವಯ ಸಾಧ್ಯವಿದೇ (ಮಾಹಿತಿ ನೀಡುವುದು). | ನಿಯಮಗಳಲ್ಲಿ ಅವಕಾಶವಿಲ್ಲ. |

ಸಂಖ್ಯೆ: ಇಪಿ 11 ಪಿಎಂಎ 2024

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

District wise Hindi Posts Sanctioned

| Sl.No | District | PST Hindi | GPT Hindi | Total |
|---|---|---|---|---|
| 1 | BAGALKOTE | 357 | 31 | 388 |
| 2 | BALLARI | 237 | 51 | 288 |
| 3 | BELAGAVI | 387 | 32 | 419 |
| 4 | BENGALURU NORTH | 127 | 40 | 167 |
| 5 | BENGALURU RURAL | 29 | 6 | 35 |
| 6 | BENGALURU SOUTH | 187 | 46 | 233 |
| 7 | BIDAR | 103 | 7 | 110 |
| 8 | CHAMARAJANAGAR | 89 | 3 | 92 |
| 9 | CHIKKABALLAPURA | 21 | 9 | 30 |
| 10 | CHIKKAMANGALORE | 58 | 1 | 59 |
| 11 | CHIKKODI | 414 | 38 | 452 |
| 12 | CHITRADURGA | 107 | 7 | 114 |
| 13 | DAKSHINA KANNADA | 170 | 3 | 173 |
| 14 | DAVANAGERE | 131 | 3 | 134 |
| 15 | DHARWAD | 306 | 12 | 318 |
| 16 | GADAG | 201 | 1 | 202 |
| 17 | HASSAN | 37 | 3 | 40 |
| 18 | HAVERI | 341 | 3 | 344 |
| 19 | KALABURAGI | 366 | 46 | 412 |
| 20 | KODAGU | 13 | 0 | 13 |
| 21 | KOLAR | 24 | 10 | 34 |
| 22 | KOPPAL | 368 | 58 | 426 |
| 23 | MADHUGIRI | 24 | 0 | 24 |
| 24 | MANDYA | 33 | 2 | 35 |
| 25 | MYSURU | 139 | 13 | 152 |
| 26 | RAICHUR | 447 | 56 | 503 |
| 27 | RAMANAGARA | 29 | 4 | 33 |
| 28 | SHIVAMOGGA | 117 | 3 | 120 |
| 29 | SIRSI | 77 | 6 | 83 |
| 30 | TUMKUR | 35 | 6 | 41 |
| 31 | UDUPI | 78 | 3 | 81 |
| 32 | UTTARKANNADA | 35 | 1 | 36 |
| 33 | VIJAYANAGARA | 284 | 22 | 306 |
| 34 | VIJAYAPURA | 483 | 39 | 522 |
| 35 | YADAGIRI | 299 | 47 | 346 |
| **Total** | | **6153** | **612** | **6765** |